ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	2005–06	
		ಸಾಮೂಹಿಕ	ವೈಯಕ್ತಿಕ
10	ಬಳ್ಳಾರಿ	10	73
11	ಬೀದರ್	187	143
12	ಗುಲ್ಬರ್ಗಾ	164	106
13	ಚಿಕ್ಕಮಗಳೂರು	14	58
14	ಹಾಸನ	34	59
15	ಕೊಡಗು	0	26
16	ಮೈಸೂರು	29	84
17	ಮಂಡ್ಯ	18	74
18	ದಕ್ಷಿಣ ಕನ್ನಡ	9	84
19	ಚಾಮರಾಜನಗರ	33	80
20	ಉಡುಪಿ	2	10
21	ಬೆಳಗಾಂ	8	83
22	ಬಿಜಾಪುರ	313	116
23	ಧಾರವಾಡ	4	166
24	ಹಾವೇರಿ	12	80
25	ಉತ್ತರ ಕನ್ನಡ	10	106
26	ಗದಗ್	13	70
27	ಬಾಗಲಕೋಟೆ	100	87
	ಒಟ್ಟು	**1142**	**2276**

1052 (1277) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಬೆಂಗಳೂರಿನ ಪ್ರೈಮ್ ರೋಸ್ ರಸ್ತೆಯಲ್ಲಿರುವ ಸರ್ಕಾರಿ ಕಲಾ ಕಾಲೇಜಿನ ಪರಿಶಿಷ್ಟಜಾತಿ/ ಪಂಗಡದ ವಿದ್ಯಾರ್ಥಿ ನಿಲಯದ 3 ಮತ್ತು 4ನೇ ಮಹಡಿಯಲ್ಲಿ ಸುಮಾರು 75 ಕೊರಡಿಗಳು ಖಾಲಿ ಇರುವುದು ನಿಜವೇ,

ಆ) ಹಾಗಿದ್ದಲ್ಲಿ, ಈ ಕೊರಡಿಗಳು ಖಾಲಿ ಇರಲು ಕಾರಣವೇನು,

ಇ) ಸರ್ಕಾರಿ ಕಲಾ ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದಲ್ಲಿ, ಬೇರೆ ಕಾಲೇಜಿನ ವಿದ್ಯಾರ್ಥಿಗಳಿಗೆ ಈ ವಿದ್ಯಾರ್ಥಿ ನಿಲಯದಲ್ಲಿ ಸ್ಥಳಾವಕಾಶ ಮಾಡಿಕೊಡಲು ಸರ್ಕಾರ ಕ್ರಮಕೈಗೊಳ್ಳುವುದೇ,

ಈ) ಬೆಂಗಳೂರಿನ ಯು ವಿ ಸಿ ಇಂಜಿನಿಯರಿಂಗ್ ಹಾಸ್ಟಲ್‌ನಲ್ಲಿ ಸುಮಾರು 300ಕ್ಕೂ ಹೆಚ್ಚು ಕಬ್ಬಿಣದ ಮಂಚಗಳು ಅನುಪಯುಕ್ತವಾಗಿರುವುದು ನಿಜವೇ,

ಉ) ಹಾಗಿದ್ದಲ್ಲಿ, ಈ ಮಂಚಗಳನ್ನು ಯಾವಾಗ ಖರೀದಿ ಮಾಡಲಾಯಿತು ಹಾಗೂ ಅನುಪಯುಕ್ತವಾಗಿರಲು ಕಾರಣಗಳೇನು,

ಊ) ಹಾಗಿದ್ದಲ್ಲಿ ಈ ಮಂಚಗಳನ್ನು ಕೂಡಲೇ ಮಂಚಗಳಿಲ್ಲದ ಬೇರೆ ವಿದ್ಯಾರ್ಥಿನಿಲಯಕ್ಕೆ ಸ್ಥಳಾಂತರ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಹೌದು

ಆ) 2002–03ನೇ ಸಾಲಿನ ಹಿಂದೆ ಸದರಿ ವಿದ್ಯಾರ್ಥಿನಿಲಯದಲ್ಲಿ 300 ವಿದ್ಯಾರ್ಥಿಗಳು ಹಾಗೂ 200ಕ್ಕೂ ಹೆಚ್ಚು ಖಾಸಗಿ ವ್ಯಕ್ತಿಗಳು ಅನಧಿಕೃತವಾಗಿ ಈ ವಿದ್ಯಾರ್ಥಿನಿಲಯದಲ್ಲಿ ಇದ್ದು, ಪ್ರತಿನಿತ್ಯ ಗಲಾಟೆ ದೊಂಬಿ ಇತ್ಯಾದಿ ಅನೈತಿಕ ಚಟುವಟಿಕೆಗಳನ್ನು ನಡೆಸುತ್ತಿದ್ದರು ಇದರಿಂದ ವಿದ್ಯಾರ್ಥಿನಿಲಯದಲ್ಲಿ ಶಾಂತಿಭಂಗವಾಗುತ್ತಿತ್ತು ಇದನ್ನು ಮನಗಂಡು ಸದರಿ ವಿದ್ಯಾರ್ಥಿನಿಲಯದಲ್ಲಿ ಅಂತಿಮ ಬಿ ಎ ವಿದ್ಯರ್ಥಿಗಳಿಗೆ ಮಾತ್ರ ಸ್ಥಳಾವಕಾಶ ಕಲ್ಪಿಸಿ ಇನ್ನುಳಿದ ಪ್ರಥಮ ಬಿ ಎ ವಿದ್ಯಾರ್ಥಿಗಳಿಗೆ ಬೆಂಗಳೂರು ಪೂರ್ವ ತಾಲ್ಲೂಕಿನ ವ್ಯಾಪ್ತಿಯಲ್ಲಿನ ವಿದ್ಯಾರ್ಥಿನಿಲಯದಲ್ಲಿ ಮತ್ತು ತೃತೀಯ ಬಿ ಎ ವಿದ್ಯಾರ್ಥಿಗಳಿಗೆ ಬೆಂಗಳೂರು ದಕ್ಷಿಣ ತಾಲ್ಲೂಕಿನ ಮಾರೇನಹಳ್ಳಿಯಲ್ಲಿ ಸ್ಥಳಾವಕಾಶ ಕಲ್ಪಿಸಲಾಗಿದೆ ಸದರಿ ಸ್ಥಳದಲ್ಲಿ ಹಾಲಿ ದ್ವಿತೀಯ ಬಿ ಎ ಯಲ್ಲಿ ಅಭ್ಯಾಸ ಮಾಡುತ್ತಿರುವ 100 ವಿದ್ಯಾರ್ಥಿಗಳಿಗೆ ಅವಕಾಶ ಮಾಡಲಾಗಿದೆ ಈ ವ್ಯವಸ್ಥೆಯಿಂದ ಅಂದಿನಿಂದ ಇಲ್ಲಿಯವರೆಗೂ ಯಾವುದೇ ರೀತಿ ಗಲಾಟೆ ಇಲ್ಲದೆ ನಿರ್ವಹಿಸಲಾಗುತ್ತಿದೆ 2006–07ನೇ ಸಾಲಿನಲ್ಲಿ ವೈದ್ಯಕೀಯ ಮತ್ತು ತಾಂತ್ರಿಕ

ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ವಿದ್ಯಾರ್ಥಿನಿಲಯದ ಪ್ರವೇಶ ಕೋರಿ ಬಹಳಷ್ಟು ಅರ್ಜಿಗಳು ಬಂದ ಪ್ರಯುಕ್ತ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ಕಟ್ಟಡದ 2ನೇ ಮಹಡಿಯಲ್ಲಿ ಅವರಿಗೆ ಸ್ಥಳಾವಕಾಶ ಕಲ್ಪಿಸಲಾಗಿದೆ

ಇ) ಸದರಿ ಕಟ್ಟಡಕ್ಕೆ ಈಗಾಗಲೇ ಮಂಜೂರಾಗಿರುವ ಬಾಲಕರ ಕಾಲೇಜು ವಿದ್ಯಾರ್ಥಿ ನಿಲಯವನ್ನು ಬಾಲಕಿಯರಿಗಾಗಿ ಪರಿವರ್ತಿಸಿದಲ್ಲಿ ಪರಿಶಿಷ್ಟ ಜಾತಿಯ ಕಾಲೇಜು ಬಾಲಕ ವಿದ್ಯಾರ್ಥಿಗಳಿಗೆ ವಾಸ್ತವ್ಯಕ್ಕೆ ತೊಂದರೆಯಾಗುತ್ತದೆ, ಆದ್ದರಿಂದ ಹಾಲಿ ಮಂಜೂರಾಗಿರುವ ಬಾಲಕರನ್ನು ಕಟ್ಟಡದ ಲಭ್ಯತೆ ಇರುವ ಕೆ ಆರ್ ಪುರಂ, ಹಾಗೂ ಮಾರೇನಹಳ್ಳಿ ವಿದ್ಯಾರ್ಥಿನಿಲಯಗಳಲ್ಲಿ ವಾಸ್ತವ್ಯಕ್ಕೆ ಏರ್ಪಾಟು ಮಾಡಿರುವುದರಿಂದ ಆ ವಿದ್ಯಾರ್ಥಿಗಳನ್ನು ಅಲ್ಲಿಯೇ ಮುಂದುವರೆಸಿ ಹಾಗೂ ಬೀಗಮುದ್ರೆ ಹಾಕಿರುವ ಸರ್ಕಾರಿ ಕಾಲೇಜು ವಿದ್ಯಾರ್ಥಿನಿಲಯ ಕಟ್ಟಡವನ್ನು ಉಪಯೋಗಿಸಿಕೊಳ್ಳಲು ಪರಿಶಿಷ್ಟ ಜಾತಿ ಬಾಲಕಿಯರಿಗಾಗಿ 300 ಸಂಖ್ಯಾಬಲದ ಕಾಲೇಜು ವಿದ್ಯಾರ್ಥಿನಿಲಯವನ್ನು ಹೊಸದಾಗಿ ಪ್ರಾರಂಭಿಸಲು ಪರಿಶೀಲಿಸಲಾಗುತ್ತಿದೆ

ಈ) ಸುಮಾರು 135 ಮಂಚಗಳು ಹಳೆಯದಾದ ಮತ್ತು ತುಕ್ಕು ಹಿಡಿದ ಕಾರಣ ಅನುಪಯುಕ್ತವಾಗಿರುವುದು ನಿಜ

ಉ) ಈ ಮಂಚಗಳನ್ನು 1993ರಲ್ಲಿ ವಿಶ್ವವಿದ್ಯಾಲಯದಿಂದ ಖರೀದಿ ಮಾಡಿದ್ದು ತುಕ್ಕು ಹಿಡಿದಿರುವಿಕೆಯೇ ಅನುಪಯುಕ್ತವಾಗಿರಲು ಕಾರಣವಾಗಿದೆ

ಊ) ಬಳಸಲು ಯೋಗ್ಯವಾಗಿರುವ ಮಂಚಗಳನ್ನು ಸಧ್ಯಕ್ಕೆ ಯು ವಿ ಸಿ ಇ ವಿದ್ಯಾರ್ಥಿನಿಲಯದಲ್ಲಿ ಉಪಯೋಗಿಸಲಾಗುತ್ತಿದೆ ಇಲ್ಲಿ ಬಳಸಬಹುದಾದ ಹೆಚ್ಚಿನ ಮಂಚಗಳು ಲಭ್ಯವಿರುವುದಿಲ್ಲ

1053 (1278) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಪಶು ಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ತೀರ್ಥಹಳ್ಳಿ ಹಾಗೂ ಹೊಸನಗರ ತಾಲ್ಲೂಕುಗಳಲ್ಲಿರುವ ವಿವಿಧ ಪಶುಚಿಕಿತ್ಸಾಲಯ, ಪಶುಆಸ್ಪತ್ರೆಗಳಲ್ಲಿ ಖಾಲಿಯಿರುವ ಹುದ್ದೆಗಳ ಬಗ್ಗೆ ಹುದ್ದೆವಾರು, ಆಸ್ಪತ್ರೆ/ ಚಿಕಿತ್ಸಾ ಕೇಂದ್ರವಾರು ವಿವರ ನೀಡುವುದು,